ಅಧ್ಯಕ್ಷರು — ರಾಜ್ಯಪಾಲರ ಭಾಷಣದ ಮೇಲೆ ಈಗಾಗಲೇ ಚರ್ಚೆ ಪ್ರಾರಂಭವಾಗಿದೆ. ಆದರಲ್ಲಿ ತಾವು ಮಾತನಾಡಬೇಕಾಗಿರುವವರಿದ್ದೀರಿ. ಇಡೀ ಸಮಯವನ್ನು ಈ ಪ್ರಶ್ನೆಯ ಬಗ್ಗೆ ತಾವು ಕೇಂದ್ರೀಕರಿಸಬಹುದು. ಆಗ ಸರ್ಕಾರ ಉತ್ತರ ಕೊಡಲೇಬೇಕಾಗುತ್ತದೆ. ನಿಮ್ಮ ಭಾಷಣವನ್ನು ನಾವು ಎದುರು ನೋಡುತ್ತಿದ್ದೇವೆ. ಈಗ ದಯವಿಟ್ಟು ತಾವು ಕುಳಿತುಕೊಳ್ಳಬೇಕು.

ಶ್ರೀ ಜಿ. ಪುಟ್ಟಸ್ವಾಮಿಗೌಡ.— ಮಾನ್ಯ ಹಂಪನಗೌಡರು ನಿಯಮ ೩೪ರ ಪ್ರಕಾರ ಮಾಡಿರತಕ್ಕ ಪ್ರಸ್ತಾವನೆಯ ಬಗ್ಗೆ ನಾವು ಈಗಾಗಲೇ ಎರಡು ಮೂರು ಬಾರಿ ಸಂಬಂಧಪಟ್ಟ ಶಾಸಕರು ಮತ್ತು ಲೋಕಸಭಾ ಸದಸ್ಯರು, ಮತ್ತು ರೈತ ಮುಖಂಡರುಗಳ ಜೊತೆ ತೀರ್ಮಾನ ಮಾಡಿ ಸೂಕ್ತ ಕ್ರಮವನ್ನು ಈಗಾಗಲೇ ಕೈಗೊಂಡಿದ್ದೇವೆ. ಮಾನ್ಯ ಸದಸ್ಯರು ಹೇಳಿರತಕ್ಕ ವಿಚಾರಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಬೆಳೆಗೆ ಮತ್ತು ಆ ಭಾಗದ ರೈತರಿಗೆ ತೊಂದರೆಯಾಗದ ರೀತಿ ಕ್ರಮ ತೆಗೆದುಕೊಳ್ಳುತ್ತೇನೆಂದು ಆಶ್ವಾಸನೆಯನ್ನು ಕೊಡುತ್ತೇನೆ.

೩ ಬೆಂಗಳೂರು ತ್ಯಾಗರಾಜನಗರದ ಪೋಲಿಸ್ ಠಾಣೆಯಂ ವ್ಯಾಪ್ತಿಯಲ್ಲಿ ಕಲ್ಲಪ್ಪ ಚಿನ್ನಪ್ಪ ಇಂಗಳೆ ಎಂಬುವರು ಕಾಣೆಯಾಗಿರುವುದು

ಶ್ರೀ ಪ್ರಭಾಕರ ಎಸ್. ರಾಣೆ (ಕಾರವಾರ).— ಬೆಂಗಳೂರು ತ್ಯಾಗರಾಜನಗರ ಪೋಲೀಸು ಠಾಣೆಯ ವ್ಯಾಪ್ತಿಯಲ್ಲಿ ಶ್ರೀ ಕಲ್ಲಪ್ಪ ಚಿನ್ನಪ್ಪ ಇಂಗಳೆ ಎಂಬುವರು ದಿನಾಂಕ ೨೭-೧೧-೮೯ರಂದು ಬೆಳಿಗ್ಗೆ ೭-೦೦ ಗಂಟೆಗೆ ಬಿ.ಹೆಚ್.ಇ.ಎಲ್. ಕಾರ್ಖಾನೆಗೆ ಹೋಗಲು ಮನೆ ಬಿಟ್ಟವರು ಕಾಣೆಯಾಗಿದ್ದು, ಅವರ ಪುತ್ರಿ ಶ್ರೀಮತಿ ರಾಜಮತಿ ಕೆ. ಇಂಗಳೆ ಅವರು ದಿನಾಂಕ ೨೯-೧೧-೮೯ರಂದು ಬೆಂಗಳೂರಿನ ತ್ಯಾಗರಾಜನಗರ ಪೋಲೀಸ್ ಠಾಣೆಯಲ್ಲಿ ೧೨೨/೮೯ನೇ ಸಂಖ್ಯೆಯಲ್ಲಿ ಪೊಕದ್ದಮೆ ದಾಖಲು ಮಾಡಿದ್ದು, ಈವರೆಗೂ ಅವರಂ ಪತ್ತೆಯಾಗಿರುವುದಿಲ್ಲ.

ಆದ್ದರಿಂದ, ಈ ಬಗ್ಗೆ ಜರೂರು ಕ್ರಮ ತೆಗೆದುಕೊಂಡು ಸದರಿಯವರ ಪತ್ತೆ ಮಾಡಿಸಬೇಕಾಗಿ ವಿನಂತಿಸುತ್ತೇನೆ.

೪ ಉಳ್ಳಾಲ ಗ್ರಾಮದ ಹತ್ತಿರ ಸಮುದ್ರ ಕೊರೆತಕ್ಕೆ ತಡೆಗೋಡೆ ಕಟ್ಟುವುದು

ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).— ಕಳೆದ ಮೂರು ವರ್ಷಗಳಿಂದ ಉಳ್ಳಾಲದಲ್ಲಿ ಸಮುದ್ರ ಕೊರತೆ ಎಡೆಬಿಡದೆ ನಡೆದಿದೆ. ೧೯೮೯ರಲ್ಲಿ ಆದಂತಹ ಕಡಲು ಕೊರೆತದಿಂದ ಇಡೀ ಉಳ್ಳಾಲದ ಹೆಚ್ಚಿನ ಕರಾವಳಿಯಲ್ಲಿ ಸುಮಾರು ೮೦೯್ಕೂ ಮಿಕ್ಕಿದ ಮನೆಗಳಂ ನೆಲಸಮವಾಗಿವೆ ನೂರಾರು ತೆಂಗಿನ ಮರಗಳು ಕೊಚ್ಚಿ ಹೋಗಿವೆ. ಮೀನಿನ ಶೆಡ್ಡುಗಳು ಸಂಪೂರ್ಣವಾಗಿ ಬಿದ್ದು ಹೋಗಿವೆ. ಬೋಟು ತಯಾರಿಸುವ ಕಾರ್ಖಾನೆಯೊಂದಂ ನೀರಂ ಪಾಲಾಗಿದೆ. ಲಕ್ಷಾಂತರ ರೂಪಾಯಿಗಳ ನಷ್ಟವಾಗಿದೆ. ಕಳೆದ ಮೂರು ವರ್ಷಗಳಿಂದ ಉಳ್ಳಾಲಕ್ಕೆ ಶಾಶ್ವತ ತಡೆಗೋಡೆ ರಚನೆ ಮಾಡಲು ಕೇಳುತ್ತಲೇ ಬಂದಿದ್ದೇನೆ. ಆದರೆ ಇನ್ನೂ ಕಾರ್ಯ ತೊಡಗಿಲ್ಲ. ಶಾಶ್ವತ ತಡೆಗೋಡೆ ಖಂಡಿತ ಮಾಡಿಕೊಡಲಾಗುವುದೆಂದು ಆಶ್ವಾಸನೆ ಹೇಳುತ್ತಾ ಬರಲಾಗಿದೆ. ಈ ವರ್ಷ ಶಾಶ್ವತ ತಡೆಗೋಡೆಗೆ ಕ್ರಮ ತೆಗೆದುಕೊಳ್ಳದೆ ಹೋದರೆ ಸಮುದ್ರ ಕೊರೆತದಿಂದ ಉಳ್ಳಾಲ ಗ್ರಾಮದ ಬಹು ಭಾಗ ಕೊಚ್ಚಿ ಹೋಗಬಹುದು ಆದ ಕಾರಣ ಈ ವರ್ಷ ಶೀಘ್ರವಾಗಿ ಶಾಶ್ವತ ತಡೆಗೋಡೆ ರಚನೆಯನ್ನು ಉಳ್ಳಾಲದಲ್ಲಿ ಪ್ರಾರಂಭಿಸುವಂತೆ ನೀರಾವರಿ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ.— ಅಧ್ಯಕ್ಷರೆ, ಮಾನ್ಯ ಇದಿನಬ್ಬರವರು ಪ್ರಸ್ತಾಪ ಮಾಡಿರತಕ್ಕ ವಿಚಾರವನ್ನು ನಾನು ತಿಳಿದುಕೊಂಡಿದ್ದೇನೆ. ಈ ವಿಚಾರದ ಬಗ್ಗೆ ನಮ್ಮ ಬಂದರು ಮಂತ್ರಿಗಳ ಜೊತೆ ಚರ್ಚಿಸಿ ಅವರು ಹೇಳಿದಂಥ ವಿಚಾರವನ್ನು ಗಮನದಲ್ಲಿಟ್ಟುಕೊಂಡು ಸೂಕ್ತ ಕ್ರಮ ಕೈಗೊಳ್ಳಲಿಕ್ಕೆ ಪ್ರಯತ್ನ ಮಾಡುತ್ತೇನೆ.

೫ ಕೊಳ್ಳೇಗಾಲದ ರೇಷ್ಮೆ ಹುರಿ ಕಾರ್ಖಾನೆಯಲ್ಲಿ ಹತ್ತಾರು ವರ್ಷಗಳಿಂದ ಕೆಲಸ ಮಾಡುತ್ತಿದ್ದ ಕೆಲಸಗಾರರಿಗೆ ಅಧಿಕಾರಿಗಳು ತೊಂದರೆ ಕೊಡುತ್ತಿರುವುದು

ಶ್ರೀ ಜಿ. ರಾಜುಗೌಡ (ಹನೂರು).— ಕೊಳ್ಳೇಗಾಲದ ರೇಷ್ಮೆ ಹುರಿ ಕಾರ್ಖಾನೆಯಲ್ಲಿ ಹತ್ತಾರು ವರ್ಷಗಳಿಂದ ಕೆಲಸ ಮಾಡುತ್ತಿದ್ದ ಖಾಯಂ ಕೆಲಸಗಾರರನ್ನು ರೇಷ್ಮೆದಾರ ತೆಗೆಯುವ ಕಾರ್ಖಾನೆಗೆ ಹೋಗಿ ಕೆಲಸ ಮಾಡಲು ಆದೇಶ ಕೊಟ್ಟಾಗ, ಮೇಲ್ಕಂಡ ೨೯ ಕೆಲಸಗಾರರು, ನಾವು ರೇಷ್ಮೆ ದಾರವನಂ

ತೆಗೆಯುವ ಕೆಲಸದಲ್ಲಿ ಪರಿಣತಿ ಹೊಂದಿಲ್ಲ. ಈ ಕಛೇರಿ ನಮಗೆ ಹೊಸದು, ನಮ್ಮಿಷ್ಟು ತಿಳಿಯದ ಕೆಲಸಕ್ಕೆ ನಿಯೋಜಿಸುವುದು ಸಾಧುವಲ್ಲ ಎಂದು ಹೇಳಿದಾಗ, ಅವರನ್ನು ಕೆಲಸಕ್ಕೆ ಬೇಡವೆಂದು ಬೀದಿಪಾಲು ಮಾಡಿದರು. ಈ ಬಗ್ಗೆ ಕಾರ್ಮಿಕರು ಲೇಬರ್ ಕೋರ್ಟಿಗೆ ಮೊರೆ ಹೋದಾಗ, ರೇಷ್ಮೆ ಇಲಾಖೆಯ ವರಿಷ್ಠ ಅಧಿಕಾರಿಗಳು, ಈ ಕಾರ್ಮಿಕರನ್ನು ಮತ್ತೆ ರೇಷ್ಮೆ ಹುರಿ ಕಾರ್ಖಾನೆಯ ಕೆಲಸಕ್ಕೆ ತೆಗೆದು ಕೊಳ್ಳುವುದಾಗಿ ಆಶ್ವಾಸನೆ ಕೊಟ್ಟು, ಅವರಿಂದ ಕೇಸನ್ನು ವಾಪಸ್ಸು ಪಡೆಯಿಸಿ ನಾಲ್ಕಾರು ತಿಂಗಳು ಕಳೆದರೂ ಈ ಬಗ್ಗೆ ಇಲಾಖೆಯ ಅಧಿಕಾರಿಗಳು ಚಕಾರ ಎತ್ತದೆ ನಿರ್ದಾಕ್ಷಿಣ್ಯವಾಗಿ ವರ್ತಿಸುತ್ತಿರುವುದರಿಂದ ೫೯ ಬಡ ಸಂಸಾರ ಹೊಟ್ಟೆಗಿಲ್ಲದೆ ಉಪವಾಸ ಬಿದ್ದಿರುವುದರಿಂದ, ದಯವಿಟ್ಟು ರೇಷ್ಮೆ ಇಲಾಖೆಯ ಮಾನ್ಯ ಮಂತ್ರಿಗಳು ತೊಂದರೆಗೊಳಗಾಗಿರುವ ಕಾರ್ಮಿಕರನ್ನು ಮತ್ತು ಇಲಾಖಾ ಅಧಿಕಾರಿಗಳನ್ನೂ ನಾಳೆಯೇ ತಮ್ಮ ಕೊಠಡಿಗೆ ಕರೆಯಿಸಿ ಕಾರ್ಮಿಕರಿಗೆ ನ್ಯಾಯ ದೊರಕಿಸಿಕೊಡಬೇಕಾಗಿ ವಿನಂತಿಸಿಕೊಂಡಿದೆ. ಮಾನ್ಯ ಸಚಿವರು ಇದಕ್ಕೆ ಸಮ್ಮತಿಸಿರುವರೆಂದು ನಂಬಿರುತ್ತೇನೆ.

೧೧–೪೫ ಎ. ಎಂ.

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಮತ್ತು ಕಾರ್ಮಿಕ, ರೇಷ್ಮೆ ಖಾತೆ ಸಚಿವರು).—ಮಾನ್ಯ ಅಧ್ಯಕ್ಷರೆ, ಕೊಳ್ಳೇಗಾಲದ ರೇಷ್ಮೆ ಕಾರ್ಖಾನೆ ೨ ಪಾಳಿಯಲ್ಲಿ ಕೆಲಸ ನಡೆಯುತ್ತಿದೆ, ಮುಂಜಾನೆ ಮತ್ತು ರಾತ್ರಿ ವೇಳೆ. ಕೆ. ಇ. ಬಿ.ನವರು ಮಿತವ್ಯಯ ದೃಷ್ಟಿಯಿಂದ ವಿದ್ಯುತ್‌ನ್ನು ಕಡಿತ ಮಾಡಿದ ಪರಿಣಾಮವಾಗಿ ೨ನೇ ಪಾಳಿಯವರು ಕೆಲಸವನ್ನು ಮಾಡುವುದಕ್ಕೆ ಸಾಧ್ಯವಾಗಲಿಲ್ಲ. ಇದರಿಂದಾಗಿ ೩೬ ಜನರಿಗೆ ಕೆಲಸ ಇಲ್ಲದೇ ಹೋಯಿತು. ನಂತರ ಈ ಕಾರ್ಖಾನೆಯಲ್ಲಿ ಆ ೩೬ ಜನ ಯಾರಿದ್ದಾರೆ ಅವರಿಗೆ ಕೆಲಸವನ್ನು ಕೊಡುವಂತೆ ಆದೇಶವನ್ನು ಕೊಡಲಾಗಿದೆ. ಈ ಪೈಕಿ ೧೧ ಜನ ಕಾರ್ಮಿಕರು ಕೆಲಸಕ್ಕೆ ಹೋದರು, ಇನ್ನುಳಿದ ೨೫ ಜನರು ಕೆಲಸಕ್ಕೆ ಹೋಗಲಿಲ್ಲ ಅವರು ಉಚ್ಚ ನ್ಯಾಯಾಲಯಕ್ಕೆ ಮನವಿಯನ್ನು ತೆಗೆದುಕೊಂಡು ಹೋದರು. ಅಲ್ಲಿ ಅವರ ಮನವಿ ವಜಾ ಆಯಿತು. ಅವರು ಮತ್ತೆ ಲೇಬರ್ ಕೋರ್ಟ್‌ಗೆ ಹೋದರು, ಅಲ್ಲಿ ಇವರ ವಾದವನ್ನು ಅವರು ಒಪ್ಪಲಿಲ್ಲ, ಇದರಿಂದಾಗಿ ಈ ಕಾರ್ಮಿಕರು ತಾವಾಗಿಯೇ ತೊಂದರೆಗೆ ಒಳಗಾಗಿದ್ದಾರೆ, ಮಾನ್ಯ ರಾಜೂಗೌಡರಿಗೆ ನಾನು ಹೇಳುವುದೇನೆಂದರೆ. ಈ ವಿಚಾರದಲ್ಲಿ ಸರ್ಕಾರದವರು ಯಾವುದೇ ಕ್ರಮವನ್ನೂ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. ಆದರೂ ಮಾನ್ಯ ರಾಜೂಗೌಡರು ಈ ವಿಚಾರವನ್ನು ಪ್ರಸ್ತಾಪ ಮಾಡಿರುವುದರಿಂದ ಆ ಕಾರ್ಮಿಕರಿಗೆ ನಮ್ಮ ಕೈಲಾದ ಸಹಾಯವನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಪಿ.ಸಿ. ಸಿದ್ದನಗೌಡರ್.—ಮಾನ್ಯ ಸಭಾಧ್ಯಕ್ಷರೆ, ನಾನು ಸಿಹಿಳರ ಕೆಳಗೆ ಒಂದು ವಿಚಾರವನ್ನು ಕಳುಹಿಸಿಕೊಟ್ಟಿದ್ದೆ. ತಾವು ಕರೆದಾಗ ನಾನು ಸದನದಲ್ಲಿರಲಿಲ್ಲ ಆದ್ದರಿಂದ ದಯವಿಟ್ಟು ನನ್ನ ನೋಟೀಸನ್ನು ತೆಗೆದುಕೊಳ್ಳಬೇಕಾಗಿ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ನೀವು ವಿಚಾರವನ್ನು ಪ್ರಸ್ತಾಪ ಮಾಡಿದರೂ ಕೂಡ ಇದಕ್ಕೆ ಸಂಬಂಧಪಟ್ಟಂಥ ಮಾನ್ಯ ಸಹಕಾರಿ ಖಾತೆಯ ಸಚಿವರೇ ಇಲ್ಲ.

ಶ್ರೀ ಪಿ.ಸಿ. ಸಿದ್ದನಗೌಡರ್.—ನಾನು ವಿಷಯವನ್ನು ಓದುತ್ತೇನೆ. ಅನಂತರ ಮಾನ್ಯ ಸಚಿವರು ಉತ್ತರ ಕೊಡಲಿ.

ಅಧ್ಯಕ್ಷರು.—ನಾನು ಈ ಸದನದ ಅಧ್ಯಕ್ಷನಾಗಿ ೩ ದಿವಸವಾಗಿದೆ. ನನಗೆ ತಿಳಿದಂತೆ ಹೇಳುವುದಾದರೆ, ಸಂಸತ್ತಿನಲ್ಲಿ ಕಾರ್ಯಕಲಾಪಗಳು ನಡೆಯುತ್ತಿರುವಾಗ ಒಂದು ಸಾರಿ ಒಬ್ಬ ಸದಸ್ಯರ ಹೆಸರನ್ನು ಸಭಾಧ್ಯಕ್ಷರು ಕರೆದಾಗ ಸದಸ್ಯರು ಸದನದಲ್ಲಿ ಹಾಜರಿಲ್ಲದಿದ್ದರೆ ಅವರು ಕೊಟ್ಟ ನೋಟೀಸ್ ಲ್ಯಾಪ್ಸ್ ಆಗುತ್ತದೆ. ಈಗ ನಾನು ನಿಮಗೆ ಒಂದು ಸಾರಿ ಅವಕಾಶವನ್ನು ಕೊಟ್ಟಿರೆ...

ಶ್ರೀ ಬಿ. ಎಸ್. ಯಡಿಯೂರಪ್ಪ.—ಹಿಂದೆ ಇದೇರೀತಿಯ ಸಂದರ್ಭಗಳು ಬಂದಾಗ ಅನೇಕ ಸಾರಿ ಹಿಂದಿನ ಅಧ್ಯಕ್ಷರುಗಳು ಅವಕಾಶವನ್ನು ಮತ್ತೊಮ್ಮೆ ಕೊಟ್ಟಿದ್ದಾರೆ. ಆದ್ದರಿಂದ ವಿಶೇಷ ಸಂದರ್ಭಗಳಲ್ಲಿ ತಮಗೆ ಅಧಿಕಾರವಿದೆ, ಕೊಡಬಹುದು.

ಅಧ್ಯಕ್ಷರು.—ವಿಶೇಷ ಸಂದರ್ಭದಲ್ಲಿ ನನ್ನ ಅಧಿಕಾರವನ್ನು ಉಪಯೋಗ ಮಾಡುವಾಗಲೂ ಕೂಡ ಮುಂದೆ ಬರತಕ್ಕ ಈ ಸದನದ ಅಧ್ಯಕ್ಷರ ಮೇಲೆ ಭಾರವನ್ನು ಹೊರಿಸಿದಂತಾಗುತ್ತದೆ. ಆದ್ದರಿಂದ ತಕ್ಷಣದಲ್ಲಿ ನಾನು ಯಾವುದೇ ಕ್ರಮವನ್ನೂ ಇದರ ಬಗ್ಗೆ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ನಾನು ಆಗಲೇ ಮಾನ್ಯ ಸದಸ್ಯರ ಹೆಸರನ್ನು ಕರೆದಾಗ ಸಂಬಂಧಪಟ್ಟ ಮಂತ್ರಿಗಳಿದ್ದರು. ಆದರೆ ಈಗ ಮಂತ್ರಿಗಳೇ ಇಲ್ಲ. ಆದ್ದರಿಂದ ದಯವಿಟ್ಟು ಕ್ಷಮಿಸಬೇಕು.

ಶ್ರೀ ಬಿ. ಹೆಚ್. ಬನ್ನಿಕೋಡ್.—ಮಾನ್ಯ ಅಧ್ಯಕ್ಷರೆ, ಇದೇ ವಿಚಾರದಲ್ಲಿ ನಾನು ಒಂದು ಗಮನ ಸೆಳೆಯುವ ಸೂಚನೆ ಕೊಟ್ಟಿದ್ದೆ ..

ಅಧ್ಯಕ್ಷರು.—ಅದು ಏನು ಎಂಬುದನ್ನು ನಾನು ನೋಡುತ್ತೇನೆ. ಈಗ ಮಾನ್ಯ ರಾಜ್ಯಪಾಲರ ಭಾಷಣದಮೇಲೆ ಮಾನ್ಯ ದೇಶಪಾಂಡೆಯವರು ಭಾಷಣವನ್ನು ಪ್ರಾರಂಭ ಮಾಡಬಹುದು.

ಶ್ರೀ ಎನ್. ಚಿಕ್ಕೇಗೌಡ.—ಮಾನ್ಯ ಅಧ್ಯಕ್ಷರೆ, ಮಾನ್ಯ ದೇಶಪಾಂಡೆಯವರು ತಮ್ಮ ಭಾಷಣವನ್ನು ಪ್ರಾರಂಭ ಮಾಡುವುದಕ್ಕೆ ಮುನ್ನ ನನ್ನದೊಂದು ಮನವಿ ಏನೆಂದರೆ ಮೊನ್ನೆ ೧೯ನೇ ತಾರೀಖು ಮಾನ್ಯ ಸಿಂಧ್ಯರವರು ನನ್ನ ಬಗ್ಗೆ ಒಂದು ಆಪಾದನೆಯನ್ನು ಮಾಡಿದ್ದರು. ೨೦ ಅಂಶದ ಕಾರ್ಯಕ್ರಮದಬಗ್ಗೆ ನಾನು ಹಸ್ತಕ್ಷೇಪ ಮಾಡಿ ಬಡವರಿಗೆ ಹರಿಜನರಿಗೆ ಸೈಟುಗಳನ್ನು ವಿಲೇವಾರಿ ಮಾಡುವುದಕ್ಕೆ ಸಂಬಂಧಿಸಿದಂತೆ ತಡ ಮಾಡಿದೆ ಅಂತ. ನಾನು ಇದನ್ನು ಪ್ರಸ್ತಾಪಿಸಿದಾಗ ಈ ಬಗ್ಗೆ ಲಿಖಿತ ಮೂಲಕ ಕೊಡಬೇಕೆಂದು ತಾವು ಕೇಳಿದ್ದೀರಿ. ಅದರ ಪ್ರಕಾರ ನಾನು ಲಿಖಿತ ಮೂಲಕ ಕೊಟ್ಟಿದ್ದೇನೆ. ಅವರು ಇದರ ಬಗ್ಗೆ ಏನು ಧೃಢಪಡಿಸುತ್ತಾರೆ ಎಂಬುದನ್ನು ಕೇಳಬಯಸುತ್ತೇನೆ.

ಅಧ್ಯಕ್ಷರು.—ತಾವು ಕೊಟ್ಟಿರತಕ್ಕದ್ದು ನನಗೆ ಬಂದಿದೆ. ಅದನ್ನು ನೋಡಿ ನಾನು ಉತ್ತರ ಹೇಳುತ್ತೇನೆ.

ಶ್ರೀ ಎನ್. ಚಿಕ್ಕೇಗೌಡ —ಅವರು ಹೇಳಿರತಕ್ಕದ್ದು ಸದನದ ಕಡತದಲ್ಲಿ ಹೋಗಿದೆ...

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೆ. ಮಾನ್ಯ ಚಿಕ್ಕೇಗೌಡರ ಹೆಸರನ್ನು ಹೇಳಿ ಅವರ ಮನಸ್ಸಿಗೆ ನೋವನ್ನುಂಟು ಮಾಡಬೇಕೆಂದು ಅಥವಾ ಅವರಿಗೆ ಅಗೌರವವನ್ನು ಸೂಚಿಸಬೇಕೆಂದು ನಾನು ಹೇಳಲಿಲ್ಲ. ಮಾನ್ಯ ಚಿಕ್ಕೇಗೌಡರು ಈ ಸದನದ ಹಿರಿಯ ಸದಸ್ಯರಾಗಿರುತ್ತಾರೆ. ಅವರಿಗೆ ಅಗೌರವವನ್ನು ತರಬೇಕು ಅವರ ಮನಸ್ಸಿಗೆ ನೋವನ್ನು ತರಬೇಕೆನ್ನುವ ಮಾತನ್ನು ನಾನು ಹೇಳಲಿಲ್ಲ. ಮಾನ್ಯ ಮಲ್ಲಿಕಾರ್ಜುನ ಖಾರ್ಗೆಯವರು ಬಡವರಿಗೆ ನಿವೇಶನಗಳನ್ನು ಹಂಚಿತಕ್ಕಂಥ ಕಾರ್ಯದಲ್ಲಿ ಹಿಂದಿನ ಸರ್ಕಾರದವರು ಏನೂ ಮಾಡಲಿಲ್ಲ ಎನ್ನುವ ಮಾತನ್ನು ಹೇಳಿದರು. ಅವರ ಕ್ಷೇತ್ರಕ್ಕೆ ಸಂಬಂಧಪಟ್ಟಹಾಗೆ. ಮಾನ್ಯ ಚಿಕ್ಕೇಗೌಡರು ಅದನ್ನು ನಾನು ಹೇಳಲಿಲ್ಲವೆನ್ನುವ ಮಾತನ್ನು ಹೇಳಿದ್ದಾರೆ. ಅವರಿಗೂ ನನಗೂ ಇರತಕ್ಕಂಥ ಗೆಳೆತನದಲ್ಲಿ ಅನೇಕ ವಿಚಾರಗಳನ್ನು ಹೇಳಿದ್ದಾರೆ. ಈ ವಿಚಾರವನ್ನು ಅವರು ಹೇಳದೆ ಇರಬಹುದು. ಆದ್ದರಿಂದ ಅವರ ವ್ಯಕ್ತಿತ್ವಕ್ಕೆ ಧಕ್ಕೆಯಾಗುತ್ತದೆಂದು ಹೇಳಿದ್ದಾರೆ. ಅದಕ್ಕೆ ನಾನು ನನ್ನ ವಿಶಾದವನ್ನು ವ್ಯಕ್ತಪಡಿಸುತ್ತೇನೆ.

೬ ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯದ ಮೇಲೆ ಚರ್ಚೆ

ಶ್ರೀ ಆರ್. ವಿ. ದೇಶಪಾಂಡೆ(ಹಳಿಯಾಳ).—ಮಾನ್ಯ ಅಧ್ಯಕ್ಷರೇ, ಮಾನ್ಯ ಈ ರಾಜ್ಯಪಾಲರ ಭಾಷಣ ಏನು ಇದೆ, ಇದು ಕೇವಲ ಕೇಂದ್ರ ಸರ್ಕಾರಕ್ಕೆ ಮನವಿ, ಮೊಮರಂಡಮ್ ಕಳುಹಿಸತಕ್ಕಂಥ ದ್ದಾಗಿದೆ ಎಂದು ಹೇಳಿದರೆ ತಪ್ಪಾಗಲಾರದು. ಇದರಲ್ಲಿ ಕೇವಲ ನಾವು ಪರಿಶೀಲಿಸುತ್ತೇವೆ, ನಾವು ಎಲ್ಲ ಹಿತವನ್ನು ಕಾಯ್ದುಕೊಂಡು ಹೋಗುತ್ತೇವೆ ಎನ್ನುವ ವಿಚಾರ ಇದೆಯೇ ಹೊರೆತು ರೈತರ ಬಗ್ಗೆಯಾಗಲಿ. ಅಥವಾ ಕೃಷಿ ಕಾರ್ಮಿಕರ ಬಗ್ಗೆಯಾಗಲಿ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಬಗೆಯಾಗಲಿ, ಅಲ್ಪಸಂಖ್ಯಾತರ ಬಗ್ಗೆಯಾಗಲಿ ಯಾವುದೇ ಸ್ಪಷ್ಟವಾದ ನಿಲುವು ಈ ಒಂದು ಭಾಷಣದಲ್ಲಿ ಎಲ್ಲೂ ಇಲ್ಲದಿರುವುದು ಬಹಳ ಆಶ್ಚರ್ಯವಾಗುತ್ತದೆ, ಮಾನ್ಯ ಸಭಾನಾಯಕರು ಸಾಕಷ್ಟು ಅನುಭವ ಪಡೆದಿರುವವರು. ಅವರು ಮುಖ್ಯಮಂತ್ರಿಗಳಾಗಿರುವಾಗ ಇಂಥ ಒಂದು ಭಾಷಣ ಈ ಸದನದಲ್ಲಿ ಆಗಿರುವುದು ಬಹಳ ಖೇದವಾಗುತ್ತದೆ, ಬಹಳ ನೋವಾಗುತ್ತದೆ. ಅವರು ಹೇಳಿದ್ದಾರೆ ೨೦ ಅಂಶಗಳ ಕಾರ್ಯಕ್ರಮಗಳನ್ನು ನಾವು ಪುನರುಜ್ಜೀವನ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆಂದು. ನಮ್ಮ ಸರ್ಕಾರ ಇದ್ದಾಗೂಲೂ ಸಹ ಈ ೨೦ ಅಂಶಗಳ ಕಾರ್ಯಕ್ರಮವನ್ನೂ ಜಾರಿಗೆ ತಂದಿದ್ದು ಅಷ್ಟೇ ಅಲ್ಲ ಕೇಂದ್ರ ಸರ್ಕಾರದವರು ಕೂಡ ನಾವು ಮಾಡತಕ್ಕಂಥ ಕೆಲಸಗಳನ್ನು ನೋಡಿ ಎಷ್ಟೋ ಸಂದರ್ಭಗಳಲ್ಲಿ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ. ಹೀಗಾಗಿ ಇವತ್ತು ಪ್ರತ್ಯಕ್ಷವಾಗಿ ಹಿಂದಿನ ಸರ್ಕಾರದಿಂದ ಏನೂ ಕೆಲಸವಾಗಲಿಲ್ಲ, ನಾವು ಮಾಡುತ್ತೇವೆನ್ನುವ ಪ್ರಯತ್ನವನ್ನು ಮಾಡುತ್ತಿದ್ದಾರೆ ಅದು ಸರಿಯಲ್ಲವೆನ್ನುವುದನ್ನು ನಾನು ಸದನದ ಗಮನಕ್ಕೆ ತರಬಯಸುತ್ತೇನೆ. ಅವರ ಪ್ರಕಾರ ಡೆಮಾಕ್ರಟಿಕ್ ಸೆಟ್‌ಅಪ್‌ನಲ್ಲಿ ಡೀಸೆಂಟ್ರಲೈಸೇಷನ್‌ಗೆ ನಾವು ಕಮಿಟ್ ಆಗಿದ್ದೇವೆಂದು ಹೇಳಿದ್ದಾರೆ. ಬಹಳ ಸಂತೋಷ. ನಮಗೊಂದು ಭಯವಾಗಿದೆ. ಏತಕ್ಕೆಂದರೆ ಜಿಲ್ಲಾ ಪರಿಷತ್ ಮತ್ತು ಮಂಡಲ್ ಪಂಚಾಯತ್‌ಗಳನ್ನು ಅನುಷ್ಠಾನಕ್ಕೆ ತಂದಮೇಲೆ ಕೆಲವು ನಮ್ಮ ಕಾಂಗ್ರೆಸ್